e-mail: ksoulwc@gmail.com
Phone:8690544544

# ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ

ಮುಕ್ತಗಂಗೋತ್ರಿ, ಮೈಸೂರು-06

## ಕಲಿಕಾರ್ಥಿ ಕಲ್ಯಾಣ ಕೇಂದ್ರ

### "ಮಾರ್ಗದರ್ಶಿ"

ವಿದ್ಯಾರ್ಥಿ- ಅಧಿಕಾರಿ ನೇರ ಸಂವಾದದ 7 ನೇ ಕಾರ್ಯಕ್ರಮದ ವರದಿ



ದಿನಾಂಕ: 25.09.2023 ರಂದು ಬೆಳಗ್ಗೆ ಸುಮಾರು 2.30 ಗಂಟೆಗಳ ಕಾಲ ವಿದ್ಯಾರ್ಥಿ ಮತ್ತು ಅಧಿಕಾರಿಗಳ ನಡುವಿನ ನೇರ ಸಂವಾದ "ಮಾರ್ಗದರ್ಶಿ" ಕಾರ್ಯಕ್ರಮ ನಡೆಸಲಾಯಿತು. ಕಾರ್ಯಕ್ರಮದಲ್ಲಿ ಸುಮಾರು 35 ಕ್ಕೂ ಹೆಚ್ಚು ಕರೆಗಳನ್ನು ಅಧೀಕ್ಷಕರು ಮತ್ತು ಸಂಯೋಜನಾಧಿಕಾರಿಗಳು ಹಾಗೂ ಸಿಬ್ಬಂದಿ ವರ್ಗ ಸ್ವೀಕರಿಸಿ ಸಮರ್ಪಕ ಉತ್ತರವನ್ನು ನೀಡಿದರು.

ಬಹುತೇಕ ಕರೆಗಳು ನೂತನ ಪ್ರವೇಶಾತಿಗೆ ಹಾಗೂ ಅಧ್ಯಯನ ಸಾಮಾಗ್ರಿಗಳಿಗೆ ಸಂಬಂಧಿಸಿದ್ದಾಗಿದ್ದವು.

ಘಟಿಕೋತ್ಸವ ಪ್ರಮಾಣ ಪತ್ರಕ್ಕಾಗಿ ಅರ್ಜಿ ಸಲ್ಲಿಸಿರುವ ವಿದ್ಯಾರ್ಥಿಗಳು ಹಾಗೂ ಸಹಯೋಗ ಸಂಸ್ಥೆಗಳ ಮುಖಾಂತರ ಪದವಿ ಪಡೆದಿರುವ ವಿದ್ಯಾರ್ಥಿಗಳ ಪ್ರಶ್ನೆಗಳಿಗೆ ಸೂಕ್ತ ಉತ್ತರ ನೀಡಲಾಯಿತು. ಉಳಿದಂತೆ, ಸಹ ಪ್ರಾಧ್ಯಾಪಕರ ಹುದ್ದೆಗೆ ಅರ್ಜಿ ಸಲ್ಲಿಸುವ ಬಗ್ಗೆ, ಪರೀಕ್ಷಾ ಫಲಿತಾಂಶ, ಲ್ಯಾಬ್ ಪರೀಕ್ಷೆ, ಅಂಕಪಟ್ಟಿ ತಿದ್ದುಪಡಿಗೆ ಸಂಬಂಧಿಸಿದ ಕರೆಗಳಿಗೆ ಸೂಕ್ತ ಮಾಹಿತಿ ನೀಡಲಾಯಿತು.

Dual course ಗಳ ಪ್ರವೇಶಾತಿಗೆ ಸಂಬಂಧಿಸಿದಂತೆ ಕರೆ ಮಾಡಿದ ವಿದ್ಯಾರ್ಥಿಗಳೊಂದಿಗೆ ಪ್ರೋತ್ಸಾಹದಾಯಕ ಸಮಾಲೋಚನೆ ನಡೆಸಲಾಯಿತು.

ಮುಂದಿನ ವಿದ್ಯಾರ್ಥಿ- ಅಧಿಕಾರಿ ನೇರ ಸಂವಾದ ಕಾರ್ಯಕ್ರಮವನ್ನು ದಿನಾಂಕ: 09.10.2023 ರಂದು ನಡೆಸಲಾಗುವುದು.

ಅಧೀಕ್ಷಕರು 25/9/23

ಸಂಯೋಜನಾಧಿಕಾರಿಗಳು 25/9/23

ಸಂಯೋಜನಾಧಿಕಾರಿ
ಕಲಿಕಾರ್ಥಿಗಳ ಕಲ್ಯಾಣ ಕೇಂದ್ರ,
ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ
ಮುಕ್ತ ಗಂಗೋತ್ರಿ, ಮೈಸೂರು-570 006.